# ಬ್ಯಾಡಗಿ ತಾಲೂಕಿನ ಕೃಷಿ ಆಚರಣೆಗಳು

**ಹನುಮಂತಪ್ಪ ಬ್ಯಾಡಗಿ**

ಕನ್ನಡ ಉಪನ್ಯಾಸಕರು, ಬಿ.ಎ.ಜೆ.ಎಸ್.ಎಸ್. ಮಹಿಳಾ ಪದವಿ ಮಹಾವಿದ್ಯಾಲಯ, ರಾಣೇಬೆನ್ನೂರು.

**Received:** 16-08-2024 ; **Acepted:** 05-09-2024 ; **Published:** 02-10-2024

**DOI: https://doi.org/10.5281/zenodo.13870704**

**ABSTRACT:**

ಭಾರತ ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಆದಿಮಾನವನು ಆರಂಭದಲ್ಲಿ ಗಡ್ಡೆ –ಗೆಣಸುಗಳನ್ನು ತಿನ್ನುತ್ತಾ ಒಂದೆಡೆ ನೆಲೆ ನಿಂತು ಕೃಷಿ ಆರಂಭಿಸಿದ. ಇದನ್ನು ಅನಾದಿಕಾಲದಿಂದಲೂ ನಮ್ಮ ಜನಪದರು ಮಾಡಿಕೊಂಡು ಬರುತ್ತಿದ್ದಾರೆ. ಕೃಷಿಯನ್ನು ನಮ್ಮ ಜನಪದರು ಹಬ್ಬದ ರೀತಿ ಆಚರಣೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ಕೃಷಿಯನ್ನು ಮಾಡಲು ಅವಶ್ಯಕವಾಗಿ ಮಳೆಬೇಕು. ಮಳೆಯನ್ನು ಸಹ ಒಂದು ಆಚರಣೆಯಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಆಚರಣೆಯಲ್ಲಿ ನಮ್ಮ ಜನಪದರು ಮನೆಗಳಿಗೆ ಹೋಗಿ ಭಿಕ್ಷಾಟನೆ ಮಾಡಿಕೊಂಡು ಮಳೆ ಬರಲು ದೈವಕ್ಕೆ ಬೇಡಿಕೊಳ್ಳುತ್ತಾರೆ. ಅದೇ ರೀತಿ ಭಾದ್ರಪದ ಶುದ್ಧ ಅಷ್ಟಮಿಯಂದು ಜೋಕುಮಾರಸ್ವಾಮಿ ಹಬ್ಬವನ್ನು ಆಚರಿಸಿ ಮಳೆ ಬರಲು ಬೇಡಿಕೊಳ್ಳುತ್ತಾರೆ. ಭಾರತ ಸುಸಂಸ್ಕೃತ ರಾಷ್ಟ್ರ. ಹಾಗಾಗಿ ಭಾರತೀಯರಿಗೆ ಪಂಚಾಂಗದ ಪ್ರಕಾರ ಹೊಸ ವರ್ಷ ಮಾರ್ಚ್–ಏಪ್ರಿಲ್ ತಿಂಗಳಲ್ಲಿ ಆರಂಭವಾಗುತ್ತದೆ. ಇದನ್ನ ನಾವು ಯುಗಾದಿ ಹಬ್ಬ ಅಥವಾ ಹೊಸ ವರ್ಷ ಎಂದು ಆಚರಿಸುತ್ತಾರೆ. ಈ ಹಬ್ಬದಲ್ಲಿ ಸ್ನಾನ ಮಾಡಿ ದೇವರಿಗೆ ಪೂಜೆ ಮಾಡಿ ಬೇವು–ಬೆಲ್ಲ ತಿನ್ನುವುದರ ಮೂಲಕ ಜೀವನ ಕಷ್ಟ ಸುಖಗಳಿಂದ ನಡೆಯುತ್ತದೆ ಎಂಬ ಸಂದೇಶವನ್ನು ನೀಡುತ್ತಾರೆ. ನಾವು ಬೆಳೆದ ಫಸಲು ಬಂದಾಗ ಭೂಮಿಯನ್ನು ಒಂದು ಹೆಣ್ಣಾಗಿ ನೋಡಿ ಆ ಹೆಣ್ಣಿಗೆ ಸೀಮಂತ ಕಾರ್ಯ ಮಾಡುವುದು ಹುಣ್ಣಿಮೆ ಹಬ್ಬದ ವಿಶೇಷತೆ. ನಂತರ ಕೃಷಿಕರು ನಮ್ಮ ಬೇಸರವನ್ನು ಕಳೆಯಲು ಹೋರಿ ಹಬ್ಬ ಆಚರಿಸುತ್ತಾರೆ. ಹಬ್ಬದಲ್ಲಿ ಎತ್ತುಗಳಿಗೆ ಕೊಬ್ಬರಿ ಹಾರ, ರಿಬ್ಬನ್ನು, ಜೂಲಾ ಹಣೆಪಟ್ಟಿ ಕಟ್ಟಿ ಸುಂದರವಾಗಿ ಅಲಂಕರಿಸಿ ಸಂತೋಷಪಡುತ್ತಾರೆ. ಬೆಳೆಯೆಲ್ಲ ಬೆಳೆದ ಮೇಲೆ ಅದನ್ನು ಒಕ್ಕಲು ಕಣದ ಹಬ್ಬ ಮಾಡುತ್ತಾರೆ. ಈ ಕಣದ ಹಬ್ಬ ತಿಂಗಳವರೆಗೂ ನಡೆಯುತ್ತದೆ. ಒಕ್ಕಿದ ನಂತರ ಕಾಳಿನ ರಾಶಿ ಮಾಡಿ ಊರಿಗೆಲ್ಲ ಊಟ ಹಾಕಿ ಅತಿ ಸಂಭ್ರಮದಿಂದ ಹಬ್ಬವನ್ನು ಆಚರಿಸುತ್ತಾರೆ. ಈ ಹಬ್ಬದಲ್ಲಿ ಕಮ್ಮಾರ, ಚಮ್ಮಾರ, ಅಗಸ, ಮುಂತಾದ ವರ್ಗದ ಜನರಿಗೆ ದಾನ ಧರ್ಮ ಮಾಡುವುದರ ಮೂಲಕ ಜಗತ್ತಿಗೆ ಹಂಚಿ ತಿನ್ನಬೇಕು ಎಂಬ ಸಂದೇಶ ನೀಡುತ್ತಾರೆ. ಇಂತಹ ಅನೇಕ ಕೃಷಿ ಆಚರಣೆಗಳು ಇಂದು ನಶಿಸಿ ಹೋಗುತ್ತಿವೆ. ಅದರ ಬಗ್ಗೆ ನಾವು ತಿಳಿಯೋಣ.

**KEYWORDS:**

ಮಳೆ ಆಚರಣೆ, ಜೋಕುಮಾರಸ್ವಾಮಿಯ ಕಥೆ, ಯುಗಾದಿ ಹಬ್ಬ, ಹೋರಿ ಹಬ್ಬ, ಭೂಮಿ ಹುಣ್ಣಿಮೆ, ಕಣದ ಹಬ್ಬ.

**ಪೀಠಿಕೆ:**

ಭಾರತ ಕೃಷಿಪ್ರಧಾನ ರಾಷ್ಟ್ರ. ಅನಾದಿಕಾಲದಿಂದಲೂ ಇಲ್ಲಿನ ಜನರು ಕೃಷಿಯನ್ನೆ ತಮ್ಮ ಮೂಲ ಕಸುಬನ್ನಾಗಿ ಮಾಡಿಕೊಂಡು ಬಂದಿದ್ದಾರೆ. ಹಾಗಾಗಿ ಕೃಷಿಯಲ್ಲಿ ತೊಡಗಿದ ಮಾನವ ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ಪ್ರತಿಯೊಂದು ವಸ್ತು, ವಿಷಯಗಳನ್ನು ದೈವವಾಗಿ ಕಂಡು ಅವುಗಳ ಆರಾಧನೆಯನ್ನು ಮೈಗೂಡಿಸಿಕೊಂಡು ಬಂದನು. ಈ ಆಚರಣೆಗಳನ್ನು ತಲೆತಲಾಂತರದಿಂದ ನಡೆಸಿಕೊಂಡು ಬರಲಾಗುತ್ತಿದೆ. ಆದರೆ ಇಂದಿನ ಆಧುನಿಕತೆಯಲ್ಲಿ ಮೂಲ ಕೃಷಿಆಚರಣೆಗಳು ಕಳೆಗುಂದಿಹೋಗುತ್ತಿವೆ. ಅದರಲ್ಲೂ ಜಾಗತೀಕರಣದ ಮಾಯಾಜಾಲಕ್ಕೆ ನಲುಗಿಹೋಗಿವೆ. ಇಂದು ಕೃಷಿಗೆ ಕೈ ಹಾಕಿ ಕೈ ಸುಟ್ಟುಕೊಳ್ಳುವ ಹಂತಕ್ಕೆ ತಲುಪಿದ್ದಾನೆ. ಆದರೆ ಆಧುನಿಕ ಕೃಷಿಕ ಅಧಿಕ ಇಳುವರಿ ಮೋಹಕ್ಕೆ ಬಿದ್ದು ಕೃಷಿಯನ್ನು ಕೈಗಾರಿಕೋದ್ಯಮಿಗಳ ಕೈಗೊಂಬೆಯಾಗಿಸುವಲ್ಲಿ ಆಧುನಿಕ ಕೃಷಿಕ ಯಶಸ್ವಿಯಾಗಿದ್ದಾನೆ. ಆದರೆ ಮೂಲ ಸಂಸ್ಕೃತಿಯ ಆಚರಣೆಗಳು ಅಳಿವಿನಂಚಿನತ್ತ ಸಾಗುತ್ತಿವೆ. ಉದಾಹರಣೆಗೆ ಪಶುಪಾಲನೆ, ಗುಡಿಕೈಗಾರಿಕೆಗಳು, ಕೆರೆ-ಕಟ್ಟೆಗಳು ನಾಶವಾಗುತ್ತಿವೆ. ಆದರೆ ನಮ್ಮ ಹಿಂದಿನ ಜನಪದರಿಗೆ ಕೃಷಿ ಕೇವಲ ಹೊಟ್ಟೆಪಾಡಿಗಾಗಿ ಆಯ್ದುಕೊಂಡ ಕಸುಬಾಗಿರದೆ ಅದು ಒಂದು ಸಂಸ್ಕೃತಿಯಾಗಿತ್ತು. ಕೃಷಿ ಮನುಷ್ಯನ ಬದುಕಿಗೆ ಮಾತ್ರ ಸೀಮಿತವಾದ ಉದ್ಯೋಗವಾಗಿರದೆ ನಿಸರ್ಗಧರ್ಮವನ್ನು ಗೌರವಿಸಲು ಕಟ್ಟಿಕೊಂಡ ಕಾಯಕವಾಗಿತ್ತು. ಸಾವಿರಾರು ವರ್ಷಗಳಿಂದ ಕೃಷಿಯನ್ನು ಜೀವನಧರ್ಮವಾಗಿಸಿಕೊಂಡು ಬಂದಿದ್ದ ನಮ್ಮ ಜನಪದಕ್ಕೆ ಕೃಷಿ ಒಂದು ನೆಲಮೂಲ ವಿಜ್ಞಾನವಾಗಿತ್ತು. ಭೂಮಿ, ಬಿಸಿಲು, ಮಳೆ ಹಾಗೂ ಋತುಗತಿಗಳಿಗೆ ಹೊಂದಿಕೊಂಡಂತೆ ಅರಳಿ ರೂಪುಗೊಂಡು ಅನುಭವದ ಅರಿವಾಗಿತ್ತು ಎಂದರೆ ತಪ್ಪಾಗಲಾರದು.

ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕು 436.6 ಚ.ಕಿ.ಮೀ ವಿಸ್ತೀರ್ಣ ಹೊಂದಿದ್ದು, 2 ಹೋಬಳಿ, 62 ಗ್ರಾಮಗಳು, 1 ಪುರಸಭೆಯನ್ನು ಹೊಂದಿರುವ ತಾಲೂಕಾಗಿದೆ. ಇಲ್ಲಿ ಆಚರಿಸುಚವಂತಹ ಕೃಷಿಕರ ಆಚರಣೆಗಳು ಈ ಕೆಳಗಿನಂತಿವೆ:

**ಕೃಷಿಕನ ಮಳೆ ಆಚರಣೆ:**

ಸರಿಯಾದ ವೇಳೆಗೆ ಮಳೆ ಬಾರದಿದ್ದಾಗ ರೈತ ಕೃಷಿ ಕಾರ್ಯಗಳನ್ನು ನಡೆಸಲು

ತುಂಬಾ ಅನಾನುಕೂಲ ಆಗುತ್ತದೆ. ಅಂತಹ ಸಂದರ್ಭಗಳಲ್ಲಿ ನಮ್ಮ ಜನಪದರು ಮೋಡಗಳನ್ನು ಅಥವಾ ಮುಗಿಲನ್ನು ನೋಡುತ್ತ, ತನ್ನ ಸುತ್ತಮುತ್ತಲಿನ ಪರಿಸರದಲ್ಲಿರುವ ಪ್ರಾಣಿ-ಪಕ್ಷಿಗಳನ್ನು ಗಮನಿಸುತ್ತ, ಗಿಡ-ಮರ, ಪ್ರಾಣಿ-ಪಕ್ಷಿಗಳ ಚಲನವಲನಗಳನ್ನು ನೋಡಿ ಮಳೆ ಬರುವುದು ಅಥವಾ ಇಲ್ಲವೊ ಎಂದು ನಿರ್ಧರಿಸುತ್ತಾರೆ. ಈ ಪರಿಸರವು ಮಳೆ ಬರುವುದರ ಸೂಚನೆ ಕೊಡುತ್ತದೆ. ಏಕೆಂದರೆ ಪ್ರಾಣಿಗಳು ಹೆಚ್ಚು ಸೂಕ್ಷ್ಮ ಸಂವೇದನೆಯನ್ನು ಹೊಂದಿರುತ್ತವೆ. ಉದಾಹರಣೆಯಾಗಿ ನೋಡುವುದಾದರೆ ಕೆಂಬೂತ (ಸಂಬಾರ ಕಾಗೆ) ಹಾಗೂ ಕೋಗಿಲೆಗಳು ಕೂಗುತ್ತಿದ್ದರೆ ಶೀಘ್ರದಲ್ಲಿ ಮಳೆ ಬರುತ್ತದೆ ಎಂಬ ಅರ್ಥಕೊಡುತ್ತದೆ. ಹಾಗೆಯೆ ಕಪ್ಪೆಗಳು ಒಂದೇ ಸಮನೆ ಕೂಗುತ್ತಿದ್ದರೆ ಮಳೆ ಬರುವ ಸಂಭವ ಹೆಚ್ಚು ಎಂದು ಹೇಳುತ್ತಾರೆ. ಗೊಟ್ಟಿಮರ ಕಾಯಿ ಜಾಸ್ತಿ ಬಿಟ್ಟ ವರ್ಷ ಬರಗಾಲ ಬರುತ್ತದೆ. ಆಗ್ನೇಯ ದಿಕ್ಕಿನಲ್ಲಿ ಮಿಂಚಿದರೆ ಆ ದಿನ ಮಳೆ ಬರುವುದಿಲ್ಲ ಎಂಬ ನಂಬಿಕೆ ಇದೆ. ಹಾಗಾಗಿ ಮಳೆ ಬಾರದಿದ್ದಾಗ ಮಳೆರಾಯನನ್ನು ಧರೆಗೆ ಕರೆತರಲು ಅನೇಕ ರೀತಿಯ ಆಚರಣೆಗಳನ್ನು ಮಾಡುವುದನ್ನು ನೋಡಬಹುದು. ಅದರಲ್ಲಿ ಮಳೆಗಾಗಿ ಭಿಕ್ಷೆ ಮಾಡುವ ಸಂಪ್ರದಾಯವು ಒಂದು. ಅಂದರೆ ಮಳೆಗಾಗಿ ಓಣಿ-ಓಣಿಗಳಲ್ಲಿ ತಿರುಗಿ ಜೋಳಿಗೆಯಲ್ಲಿ ಭಿಕ್ಷೆ ಬೇಡುವ ಆಚರಣೆ ವಿಶೇಷವಾಗಿದೆ.

ಹೀಗೆ ಭಿಕ್ಷೆ ಬೇಡುವುದರಿಂದ ಮಳೆ ಬರುತ್ತದೆ ಎಂಬುದು ಕೃಷಿಕರ ಧೃಢನಂಬಿಕೆಯಾಗಿದೆ. ಇನ್ನೂ ಕೆಲವು ಕಡೆಗಳಲ್ಲಿ ಊರಿನ ಜನರೆಲ್ಲ ಸೇರಿ ಗುಡ್ಡದಲ್ಲಿರುವ ಮಲ್ಲಪ್ಪ ದೇವರು, ಸಿದ್ದಪ್ಪ ದೇವರಿಗೆ ಮನೆಗೆ ಒಬ್ಬರಂತೆ ರೊಟ್ಟಿ, ಬುತ್ತಿ ಕಟ್ಟಿಕೊಂಡು ಹೋಗಿ ಗುಡ್ಡದ ಮೇಲಿರುವ ದೇವಾಲಯದಲ್ಲಿ ಭಜನೆ ಮಾಡಿ ಮಳೆರಾಯನನ್ನು ಧರೆಗೆ ಬಾ ಎಂದು ಪ್ರಾರ್ಥನೆ ಮಾಡುತ್ತಾರೆ. ಮತ್ತೆ ಕೆಲವರು ಒಂದು ವಾರಗಳ ಕಾಲ ನಿರಂತರ ಭಜನೆ ಮಾಡಿ ದೇವರನ್ನು ಪ್ರಾರ್ಥಿಸಿ ಮಳೆರಾಯನ್ನು ಭೂಮಿಗೆ ಕರೆತರುವ ಪ್ರಯತ್ನ ಮಾಡುತ್ತಾರೆ. ಹೀಗೆ ಇನ್ನು ಹಲವಾರು ರೀತಿಗಳಲ್ಲಿ ಮಳೆರಾಯನ ಆರಾಧನೆಯ ಕುರಿತಾದ ಸಂಪ್ರದಾಯ, ಆಚರಣೆಗಳನ್ನು ನಾವು ಗಮನಿಸಬಹುದು.

**ಜೋಕುಮಾರಸ್ವಾಮಿಯ ಕಥೆ:**

ಮಳೆರಾಯನನ್ನು ಭೂಮಿಗೆ ಕರೆತರಲು ನಮ್ಮ ಜನಪದರು ಭಾದ್ರಪದ ಶುದ್ಧ ಅಷ್ಟಮಿಯಂದು ಜೋಕುಮಾರಸ್ವಾಮಿ ಒಕ್ಕಲು ಮಕ್ಕಳು ಉತ್ತರಿಮಳೆ ತರುವರೆಂಬ ನಂಬಿಕೆಯಿದೆ. ಜೋಕುಮಾರ ಸ್ವಾಮಿ ಚತುರ್ದಶಿಯ ದಿನ ತಾನು ಬಂದ ಕಾರ್ಯ ಮುಗಿಸಿ ಹೊರಡುವ ಮುನ್ನ ಮನೆ ಮನೆಗೆ ಭೇಟಿ ನೀಡಿ ಜೋಳದ ನುಚ್ಚು ಕೊಟ್ಟು ಹೋಗುತ್ತಾನೆ. ರೈತರು ಅದನ್ನು ಹೊಲದಲ್ಲಿ ಬಿತ್ತಿದರೆ ಜೋಳದ ಫಸಲು ಹುಲುಸಾಗಿ

ಬೆಳೆಯುತ್ತದೆ ಎಂದು ಹಿಂದಿನಿಂದ ಇಂದಿನ ತನಕ ನಮ್ಮ ರೈತರು ನಂಬಿಕೊಂಡು ಬಂದಿದ್ದಾರೆ.

ಈ ಜೋಕುಮಾರ ಸ್ವಾಮಿಯನ್ನು ಬೇಸ್ತ ಜನಾಂಗದ ಹೆಣ್ಣುಮಕ್ಕಳು ಬೀದಿರಿನ ಬುಟ್ಟಿಯ ಸಂಗಡ ಮಣ್ಣಿನಿಂದ ಜೋಕುಮಾರಸ್ವಾಮಿ ಮೂರ್ತಿ ಮಾಡಿ ಅದಕ್ಕೆ ಬೇವಿನ ಸೊಪ್ಪಿನಿಂದ ಅಲಂಕರಿಸಿ ಬುಟ್ಟಿಯನ್ನು ತಲೆಯ ಮೇಲಿಟ್ಟುಕೊಂಡು ಮನೆ ಮನೆಗೆ ತಿರುಗಿ ಜೋಕುಮಾರನ ಮೇಲೆ ಪದ ಹೇಳುತ್ತಾರೆ. ಆ ಪದಗಳ ಸಾರಾಂಶ ಎನೆಂದರೆ ಜೋಕುಮಾರ ಸ್ವಾಮಿಯು ಕುದುರೆ ಏರಿ ಸಂಚರಿಸುತ್ತಾ ಭೂಮಿಗೆ ಮಳೆ ಬರಿಸುತ್ತಾನೆ. ಕೆರೆ-ಕಟ್ಟೆಗಳಿಗೆ ಜೀವ ತುಂಬುತ್ತಾನೆ ಎಂಬುದೆ ಪದಗಳ ಸಾರಾಂಶ ಇದು ಜನಪದರ ಭಾವನೆ. ಜೋಕುಮಾರಸ್ವಾಮಿಯನ್ನು ಬೇಸ್ತ ಜನಾಂಗದ ಹೆಣ್ಣುಮಕ್ಕಳು ಬೀದಿರಿನ ಬುಟ್ಟಿಯಲ್ಲಿ ಹೊತ್ತು ತರುತ್ತಾರೆ. ಮೂರ್ತಿಯು ಅಗಲವಾದ ಮುಖವನ್ನು ಹೊಂದಿದ್ದು, ದೊಡ್ಡ ಕಣ್ಣುಗಳಿರುತ್ತವೆ, ಅಗಲವಾದ ಬಾಯಿ, ತಲೆಗೆ ಕಿರೀಟವಿರುತ್ತದೆ, ಹಣ್ಣೆಗೆ ಕುಂಕುಮವಿದ್ದು, ಮುಖದಮೇಲೆ ಹುರಿಮೀಸೆ ಇದ್ದು ನೋಡಲು ತುಂಬಾ ಆಕರ್ಷಕವಾಗಿರುತ್ತದೆ. ಜನಪದರ ಜೋಕುಮಾರಸ್ವಾಮಿಯು ಪೌರಾಣಿಕ ವ್ಯಕ್ತಿ. ಇತನ ಹುಟ್ಟು-ಸಾವಿನ ಕುರಿತ್ತಾದ ಐತಿಹ್ಯ ಕುತೂಹಲಕಾರಿಯಾದದ್ದು, ಐತಿಹ್ಯ ಕತೆ ಇದೆ. ನಮ್ಮ ಜನಪದರ ಪ್ರಕಾರ ಮಳೆ ಬರಿಸುವವನು ದೇವ ದೇವೆಂದ್ರ. ಅವನು ಬೆಳ್ಳಿ ರಥದಲ್ಲಿ ಕುಳಿತು ಆಕಾಶ ಮಾರ್ಗದಲ್ಲಿ ಹೋಗುವಾಗ ಹೊಮ್ಮುವ ಶಬ್ದವೇ ಗುಡುಗು-ಸಿಡಿಲುಗಳು. ಅವನು ತನ್ನ ಕುದುರೆಗಳಿಗೆ ಹುರುದುಂಬಿಸಲು ಬೀಶೂ ಛಾಟಿಯೇಟಿನ ಛಳಕೇ ಮೀಚು. ಮಳೆಯ ಬಗ್ಗೆ ಅವರು ಕಟ್ಟಿರುವ ಪುರಾಣ, ಹೇಳುವ ಕಥೇಗಳು ಹಾಡುವ ಪದಗಳು ಮಾಡುವ ಪೂಜೆಗಳು ಅಸಂಖ್ಯ. ಪ್ರತಿಯೊಂದು ಮಳೆಯ ಬಗ್ಗೆ ಮಳೆಯ ಬರುವಿಕೆ-ಹೋಗುವಿಕೆಯ ಬಗ್ಗೆ ಅವರ ವಿಶ್ಲೇಷಣೆ ನೂರಾರು ವರ್ಷಗಳ ಅನುಭವದ ಸಾರ ಎಂದು ಹೇಳಬಹುದು.

**ಯುಗಾದಿ ಹಬ್ಬ ಆಚರಣೆ:**

ಭಾರತೀಯ ಪಂಚಾಂಗದ ಪ್ರಕಾರ ಭಾರತೀಯರಿಗೆ ಹೊಸ ವರ್ಷ ಈ ಹಬ್ಬದ ದಿನದಿಂದಲೇ ಪ್ರಾರಂಭವಾಗುತ್ತದೆ. ಇದು ಪ್ರತಿ ವರ್ಷ ಮಾರ್ಚ ಅಥವಾ ಏಪ್ರೀಲ್ ತಿಂಗಳಲ್ಲಿ ಬರುತ್ತದೆ. ಅದನ್ನು ಯುಗಾದಿ ಅಮವಾಸ್ಯೆ ಎಂದು ಕರೆಯುತ್ತಾರೆ. ಇದು ವರ್ಷದ ಮೊದಲ ಹಬ್ಬ. ಈ ದಿನ ಬೆಳಿಗ್ಗೆ ಎದ್ದು ಹಂಡೆಯಲ್ಲಿ ನೀರು ಹಾಕಿ ಹಂಡೆಗೆ ಮಾಲಿಂಗದ ಬಳ್ಳಿಯನ್ನು ಸುತ್ತಿ ಅದಕ್ಕೆ ಪೂಜೆ ಮಾಡಿ ಬೇವಿನ ಸೊಪ್ಪನ್ನು ನೀರಿನಲ್ಲಿ ಹಾಕಿ ಕುದಿಸಿ ನಂತರ ತಲೆಗೆ ಮತ್ತು ಮೈಗೆ ಎಣ್ಣೆ ಹಚ್ಚಿ ಸ್ನಾನ ಮಾಡುತ್ತಾರೆ. ಆ ನಂತರ ದೇವರ ಮನೆಯಲ್ಲಿ ದೇವರಿಗೆ ಪೂಜೆ ಮಾಡಿ ಬೇವು-ಬೆಲ್ಲ ತಿಂದು ನೀರಿನಲ್ಲಿ ಬಸ್ತ (ಬೇಯಿಸಿದ) ಶಾವಿಗೆಯನ್ನು ಊಟ ಮಾಡುತ್ತಾರೆ. ಅಂದೇ ಕೃಷಿಕರು

ತಮ್ಮ ಹೊಲಗಳಿಗೆ ಹೋಗಿ ಎತ್ತುಗಳನ್ನು ಬಳಸಿ ಕುಂಟಿ ಹೊಡೆಯುವುದರ ಮೂಲಕ ಹೊಲವನ್ನು ಸ್ವಚ್ಚಗೊಳಿಸಿ ವರ್ಷದ ಮೊದಲ ಕೃಷಿ ಕಾರ್ಯ ಪ್ರಾರಂಭ ಮಾಡುತ್ತಾರೆ. ಕೆಲವು ಸಂದರ್ಭದಲ್ಲಿ ಸೋಮವಾರ ಯುಗಾದಿ ಅಮವಾಸ್ಯೆ ಬಂದರೆ ಆ ದಿನ ಎತ್ತುಗಳಿಂದ ಬೇಸಾಯ ಮಾಡದೆ, ಗುದ್ದಲಿ ಪೂಜೆ ಮಾಡಿ ಮುಗಿಸುತ್ತಾರೆ. ಆದರೆ ಇಂದು ಆಧುನಿಕ ಕಾಲವಾದ್ದರಿಂದ ಟ್ರಾಕ್ಟರ್‌ಗಳನ್ನು ಬಳಸಿ ಹೊಲದಲ್ಲಿ ಉಳಿಮೆ ಪ್ರಾರಂಭ ಮಾಡುತ್ತಾರೆ.

**ಭೂಮಿ ಹುಣ್ಣಿಮೆ ಹಬ್ಬ:**

ಭೂಮಿ ಹುಣ್ಣಿಮೆ ಹಬ್ಬ ಬರುವುದು ವರ್ಷದ ಬೆಳೆಯ ಕದಿರು ಹೊರ ಬರುವ ಸಂದರ್ಭದಲ್ಲಿ. ಭೂದೇವಿಯು ಗರ್ಭಿಣಿ ಆದಳೆಂದು ರೈತ ಪರಿವಾರದವರ ಭಾವನೆ. ಹಾಗಾಗಿ ಅವಳಿಗೆ ಸೀಮಂತಕಾರ್ಯ ಮಾಡಿ ಆಕೆಯ ಸುಪ್ತ ಬಯಕೆಯನ್ನು ಇಡೇರಿಸಿವುದು ಎಂದು ಅರ್ಥ. 'ಭೂಮಿ ಹುಣ್ಣಿಮೆಯೂ' ರೈತ ಸಮುದಾಯದವರು ಭೂಮಿತಾಯಿಗೆ ತೀರಿಸುವ ಋಣವಾಗಿದೆ. ಹಾಗಾಗಿ ಭೂದೇವಿಯನ್ನು ಸ್ತ್ರೀಗೆ ಹೋಲಿಸುವುದು ಭಾರತೀಯ ಸಂಸ್ಕೃತಿಯಲ್ಲಿ ಕಂಡು ಬರುತ್ತದೆ. ರೈತ ಸಮುದಾಯದವರು ಭೂಮಿತಾಯಿಯನ್ನು ನೆನೆದು ಹಾಡುವ ಹಾಡು, ''ಹಚಮ್ಲಿ ಹಾಲಮ್ಲಿ ಹಿತ್ಲಾಗಿನ ಹೀರೆಕಾಯಿ ಮುಂದಿನ ಸಾಲಿಗೆ ಮತ್ತಷ್ಟು ಬೆಳೆ ಬರಲಿ ದೇವಿ'' ಎಂದು ಹಾಡುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಹಾಡು ಹೇಳುವಂತಹ ಸಂಪ್ರದಾಯವೇ ಕಡಿಮೆ ಆಗುತ್ತಿದೆ.

**ಕೃಷಿಕರ ಹೋರಿ ಹಬ್ಬ:**

ವರ್ಷಕ್ಕೆ ಒಂದು ಬಾರಿ ನಡೆಯುವ ಹೋರಿ ಹರಿಯುವ ಹಬ್ಬ ಅಥವಾ ಹೋರಿ ಓಡಿಸುವ ಹಬ್ಬವೆಂದು (ಹೋರಿ ಹಬ್ಬ ) ಮಾಡುತ್ತಾರೆ. ಇದು ಸಾಮಾನ್ಯವಾಗಿ ದೀಪಾವಳಿಯ ಹಬ್ಬದಂದು ಹಟ್ಟಿ ಇಟ್ಟು ಅಂದು ನಿಯಮದಂತೆ ಊರಿನ ಅಗಸಿಯಲ್ಲಿ ತಮ್ಮ ಮನೆಯಲ್ಲಿರುವ ಹೋರಿಗಳಿಗೆ ಅಲಂಕರಿಸಿ ನಿಯಮದಂತೆ ಓಡಿಸುತ್ತಾರೆ. ಈ ಹೋರಿಹಬ್ಬವನ್ನು ರೈತ ಸಮುದಾಯದವರು ಬಹಳ ಉತ್ಸಾಹ, ಉತ್ಸುಕತೆಯಿಂದ, ಹುಮ್ಮಸ್ಸಿನಿಂದ ಮಾಡುತ್ತಾರೆ. ಅಂದರೆ ವರ್ಷಪೂರ್ತಿ ಕೃಷಿ ಚಟುವಟಿಕೆಯಲ್ಲಿ ತೊಡಗಿದ ಅವರಿಗೆ ತಮ್ಮ ಬೇಸರ ಕಳೆಯಲು ಈ ಒಂದು ಹಬ್ಬ ಹುಮ್ಮಸ್ಸಿನ ಹಬ್ಬ ರೈತರದ್ದಾಗಿರುತ್ತದೆ. ಹಾಗಾಗಿ ಈ ಪ್ರದೇಶದ ಜನ ಕರಿ ಹೋಗುವ (ಹಟ್ಟಿ ಹಬ್ಬದ ಹೋರಿ) ಎತ್ತುಗಳನ್ನು ಹೆಚ್ಚು ಹಣ ಕೊಟ್ಟು ಖರೀದಿಸುತ್ತಾರೆ. ಅವರು ಹೋರಿ ಹಬ್ಬದ ದಿನದಂದು ಹೋರಿಯನ್ನು ಮೈತೊಳೆದು ಕೋಡಿಗೆ ಬಣ್ಣ ಹಚ್ಚಿ, ಮೈಯಿಗೆ ಜೂಲ ಹಾಕಿ, ಕೊರಳಿಗೆ ಕೊಬ್ಬರಿ, ರಿಬ್ಬನನ್ನು ಕಟ್ಟಿ, ಕಾಲಿಗೆ ಗೆಜ್ಜೆ ಕಟ್ಟಿ, ಹಣೆಗೆ ಹಣೆಕಟ್ಟು ಕಟ್ಟಿ, ಮುಖಕ್ಕೆ ಮುಖವಾಡ ಹಾಕಿ ಹೋರಿಯನ್ನು ಸುಂದರವಾಗಿ

ಮಧುವಣಗಿತ್ತಿಯಂತೆ ಅಲಂಕರಿಸುತ್ತಾರೆ.

ಈ ರೀತಿ ಅಲಂಕರಿಸಿಕೊಂಡು ನಡೆಯುವ ಹಬ್ಬ ಹಾವೇರಿ ಜಿಲ್ಲೆ ಬ್ಯಾಡಗಿ ತಾಲೂಕಗಳಲ್ಲಿ ಹೆಚ್ಚು ಪ್ರಸಿದ್ಧಿ ಪಡೆದ ಹಬ್ಬ ಇದಾಗಿದೆ. ಈ ಹಬ್ಬಕ್ಕೆ ರೈತರು ತಮ್ಮ ಹೋರಿ ತೆಗೆದುಕೊಂಡು ಬರುತ್ತಾರೆ. ಇಲ್ಲಿ ಅಗಸಿ ಎಂದು ನಿರ್ದಿಷ್ಟ ಪಡಿಸಿದ ರಸ್ತೆಯನ್ನು ಗುರುತಿಸುತ್ತಾರೆ. ಅದು ಸುಮಾರು 100 ರಿಂದ 200 ಮೀಟರ್ ದೂರ ಇರುತ್ತದೆ. ಅಲ್ಲಿ ಹೋರಿ ಬಿಡುವಾಗ, ಬಿಡುವ ಸ್ಥಳದಲ್ಲಿ ಕಬ್ಬಿಣದ ಗೇಟ್ ಮಾಡಿಸಿರುತ್ತಾರೆ. ಕಾರಣ ಕೆಲ ಹೋರಿಗಳು ರೈತರಿಗೆ ಬಗ್ಗುವುದಿಲ್ಲ (ನಿಯಂತ್ರಣಕ್ಕೆ ಸಿಗುವುದಿಲ್ಲ ). ಅಂತಹ ಹೋರಿಗಳಿಗೆ ಗೇಟ್ ಹಾಕಿದಾಗ ಜನರಿಗೆ ಹಾನಿ ಆಗುವುದನ್ನು ತಪ್ಪಿಸಲು ಸಾಧ್ಯ ಎಂದು ಗೇಟ್ ಹಾಕಿರುತ್ತಾರೆ. ಇಲ್ಲಿ ಹೋರಿಗಳನ್ನು ಸರತಿ ಸಾಲಿನಲ್ಲಿ ನಿಲ್ಲಿಸಿ ಒಂದಾದ ನಂತರ ಒಂದನ್ನು ಗೇಟಿನಲ್ಲಿ ಬಿಡುತ್ತಾರೆ. ಹೋರಿ ಬಿಟ್ಟಾಗ ಕೊಬ್ಬಿದ ಹೋರಿಗಳನ್ನು ಹಿಡಿಯಲು ಸಾವಿರಾರು ಜನರು ಹೋರಿ ಹಿಡಿಯಲು ನಿಂತಿರುತ್ತಾರೆ. ರೈತರು ವರ್ಷದಲ್ಲಿ ಬರುವ ಒಂದು ಹೋರಿಹಬ್ಬವನ್ನು ಬಹಳ ಉತ್ಸುಕರಾಗಿ ಆಚರಿಸುತ್ತಾರೆ. ಈ ಹೋರಿ ಬೆದರಿಸುವ ಹಬ್ಬವು ಬ್ಯಾಡಗಿಯಲ್ಲಿ ಪ್ರತಿ ವರ್ಷ ನಡೆಯುತ್ತಿತ್ತು. ಆದರೆ ಕೊವೀಡ್ ಕಾರಣ ಇತ್ತೀಚಿನ 2–3 ವರ್ಷಗಳಿಂದ ನಡೆದಿಲ್ಲ ಎಂದು ಅಲ್ಲಿಯ ಸ್ಥಳೀಯರು ತಿಳಿಸುತ್ತಾರೆ.

**ಕೃಷಿಕರ ದೇಶಿ ಸಂಸ್ಕೃತಿ ರಾಶಿಹಬ್ಬ (ಕಣದ ಹಬ್ಬ ):**

ಕಣ ತುಂಬುವಷ್ಟು ಧಾನ್ಯವನ್ನು ಕೊಟ್ಟಂತಹ ಭೂದೇವಿ, ನೀರು, ಗಾಳಿ, ಪಶು, ಪ್ರಾಣಿ, ಪಕ್ಷಿಗಳು ಮತ್ತು ಜೀವಸಂಕುಲದ ಎಲ್ಲ ಘಟಕಗಳಿಗೂ ಗೌರವದಿಂದ ನಮಿಸುವಂತಹ ವಿಶಿಷ್ಠ ಆಚರಣೆಯೆ 'ರಾಶಿ' ಪೂಜೆ ಎಂದು ಕರೆಯುತ್ತಾರೆ. ಇಲ್ಲಿ ಮುಖ್ಯವಾಗಿ ಮೊರ ನೀರಿನ ಸಂಕೇತವಾದರೆ, ಗಿಡ, ಮರ, ಬಳ್ಳಿ ಎಲೆಗಳು ಕೀಟಗಳನ್ನು ಪ್ರತಿನಿಧಿಸುತ್ತದೆ. ಕಳೆಯನ್ನು ಗರಿಕೆಯ ಮೂಲಕ ಸಮೀಕರಿಸಲಾಗುತ್ತದೆ. ರೈತನು ತಾನು ಬೆಳೆದಂತಹ ಬೆಳೆಗೆ ಸಹಾಯ ಮಾಡಿದ ಪ್ರತಿಯೊಂದು ಜೀವರಾಶಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಗೌರವ ಸಲ್ಲಿಸುವಂತಹ ಆಚರಣೆಯೇ ‘ರಾಶಿ ಪೂಜೆ’ ಎನ್ನಬಹುದು. ಮಲೆನಾಡಿನಲ್ಲಿ ‘ಭತ್ತದ ರಾಶಿ ಪೂಜೆ’ ಮಾಡಿದರೆ, ಅರೆಮಲೆನಾಡಿನಲ್ಲಿ ‘ಜೋಳದ ರಾಶಿ’ ಪೂಜೆ ಮಾಡುತ್ತಾರೆ.

ರೈತನು ತಾನು ಬೆಳೆದಂತಹ ಬೆಳೆಯನ್ನು ಮೊದಲು ಭೂದೇವಿಗೆ ಸಮರ್ಪಿಸುತ್ತಾನೆ. ನಂತರ ಬೇರೆಯವರಿಗೆ ದಾನ–ಧರ್ಮ ಮಾಡುವುದು ಸಹಜ. ಮೈಸೂರು ಭಾಗದಲ್ಲಿ 'ರಾಗಿ' ಕಣದ ಹಬ್ಬ ಮಾಡಿದರೆ, ಉತ್ತರ ಕರ್ನಾಟಕದ ಭಾಗಗಳಲ್ಲಿ 'ಜೋಳದ' ರಾಶಿ ಹಬ್ಬ ಮಾಡುತ್ತಾರೆ. ಜೋಳದ ತೆನೆಯನ್ನು ಕಟಾವು ಮಾಡಿ ಒಂದೆಡೆ ಗುಡ್ಡೆ ಹಾಕಿ ನಂತರ ಕಣದ ಕಾರ್ಯ ಪ್ರಾರಂಭ ಮಾಡುತ್ತಾರೆ.

'ಕಣ' ಎಂದರೆ ಧಾನ್ಯವನ್ನು ಒಕ್ಕುವಂತಹ ಸ್ಥಳ. ಇದು ರೈತರ ದೇವರ ಮನೆ ಎಂದೇ ಕರೆಸಿಕೊಳ್ಳುತ್ತದೆ. ಹಿಂದೆಲ್ಲಾ ರಾಶಿ ಪೂಜೆ ಕಾರ್ಯವು ತಿಂಗಳೊಪ್ಪತ್ತು ಕಾಲ ನಡೆಯುತ್ತಿತ್ತು. ಈ ಸಮಯದಲ್ಲಿ ರೈತರು ಮನೆಯಲ್ಲಿ ಇರುವುದಕ್ಕಿಂತ ಕಣದಲ್ಲಿ ಇರುವುದು ಹೆಚ್ಚು. ಹಾಗಾಗಿ ಈ ಸಮಯದಲ್ಲಿ ಕಣವೇ ಮನೆ, ಕಣವೇ ಸರ್ವಸ್ವವಾಗಿರುತ್ತದೆ. ಹಿಂದಿನ ಕಾಲದಲ್ಲಿ ರೈತರು ಕಣವನ್ನು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸಿದ್ಧಪಡಿಸುತ್ತಿದ್ದರು. ಅಂದರೇ ಹತ್ತು ಎತ್ತಿನ ಕಣ, ಇಪ್ಪತ್ತು ಎತ್ತಿನ ಕಣ ಎಂದು ಮಾಡುತ್ತಿದ್ದರು. ಅಂದರೆ 10-15 ಎಕರೆ ವ್ಯಾಪ್ತಿಯ ಹೊಲವಿರುವವರನ್ನು ದೊಡ್ಡ ರೈತರು ಎಂದು ಕರೆಯುತ್ತಾರೆ. ಇವರು ಇಪ್ಪತ್ತು ಎತ್ತಿನ ಕಣ ಮಾಡುತ್ತಾರೆ.

ಈ ಕಣವನ್ನು ಮನೆಯ ಹತ್ತಿರ ಇರುವ ವಿಶಾಲವಾದ ಜಾಗದಲ್ಲಿ ವೃತ್ತಾಕಾರದಲ್ಲಿ ಹುಲ್ಲನ್ನು ಕೆತ್ತಿ, ನೀರು ಬಿಟ್ಟು, ದನಗಳಿಂದ ತುಳಿಸಿ, ನಂತರ ರೋಣಗಲ್ಲನ್ನು ಎತ್ತಿಗೆ ಕಟ್ಟಿ ಮಣ್ಣನ್ನು ಗಟ್ಟಿ ಆಗುವ ತನಕ ಹೊಡೆದಾಗ ನೆಲವು ಮಟ್ಟಸವಾಗಿ ನೆಲವು ಸಮನಾಗಿ ಗಟ್ಟಿಯಾಗುತ್ತದೆ. ನಂತರ ಮರುದಿನ ಬೆಳಿಗ್ಗೆ ಅದನ್ನು ಸಗಣಿಯಿಂದ ಸಾರಿಸಿ ಕಣ ತಯಾರಿ ಮಾಡುತ್ತಾರೆ. ಕಣದ ಮಧ್ಯದಲ್ಲಿ ನೇಟಿ ನೆಡುತ್ತಾರೆ. ಈ ಕಣವನ್ನು ನಾಲ್ಕು-ಐದು ಮನೆಯವರು ಸೇರಿ ಕಣ ಮಾಡಿ ಒಬ್ಬರಾದ ನಂತರ ಒಬ್ಬರು ಒಕ್ಕುವ ಕಾರ್ಯ ಮಾಡುತ್ತಾರೆ. ಒಕ್ಕುವುದಾದನಂತರ ಕಣ ಹಾಳಾಗಿದ್ದರೆ ಆಗ ಮತ್ತೆ ಸಗಣಿಯಿಂದ ಸಾರಿಸಿ ತಯಾರಿಸಿಕೊಳ್ಳುತ್ತಾರೆ.

ಈ ಕಣದಲ್ಲಿ ಯಾರು ಚಪ್ಪಲಿ ಹಾಕಿಕೊಂಡು ಬರುವಂತಿಲ್ಲ ಮತ್ತು ಎಲೆ-ಅಡಿಕೆ ಹಾಕಿಕೊಂಡು ಉಗುಳುವಂತಿಲ್ಲ. ಏಕೆಂದರೆ ಅದು ರೈತರಿಗೆ ಪವಿತ್ರ ಸ್ಥಳವಾಗಿರುತ್ತದೆ. ಈ ಕಣದಲ್ಲಿ 'ರೋಣುಗಲ್ಲು' ಮುಖ್ಯ ರಥವಿದ್ದಂತೆ. ಅದಕ್ಕೆ ಪೂರಕವಾಗಿ ಜಂತುಗುಂಟಿ, ಬರಲು, ಮಿಣಿ, ನೊಗ, ಗ್ವಾರಿ, ಮರ ಹೀಗೆ ಮುಂತಾದ ಕೃಷಿಉಪಕರಣ ಬಳಸಿ ಕಣವನ್ನು ಒಕ್ಕಲು ಮಾಡುತ್ತಾರೆ. ಈ ಒಂದು ಕಣದ ಒಕ್ಕುವ ಕಾರ್ಯವು ಸುಮಾರು 15 ದಿನಗಳವರೆಗೆ ನಡೆಯುತ್ತದೆ. ನಂತರ ರಾಶಿ ಪೂಜೆ ನಡೆಯುತ್ತದೆ. ಒಕ್ಕಿದ ಭತ್ತ, ರಾಗಿ, ಜೋಳಗಳನ್ನು ದೊಡ್ಡದಾದ ರಾಶಿ ಮಾಡುತ್ತಾರೆ. ತಾವು ಬೆಳೆದ ಧಾನ್ಯವನ್ನು ಐದು ರಾಶಿಯಾಗಿ ಮಾಡುತ್ತಾರೆ. ದೊಡ್ಡ ರಾಶಿ ದೇವರ ರಾಶಿ, ಬುದ್ಧಿವಂತರಾಶಿ, ಗೌರಮ್ಮನರಾಶಿ, ಕಡ್ಡಿರಾಶಿ ಎಂದು ಮಾಡಿರುತ್ತಾರೆ. ನಂತರ ರಾಶಿಯ ಸುತ್ತಲೂ ಹಸೆ ಬರೆಯುತ್ತಾರೆ. ದೊಡ್ಡ ರಾಶಿಯ ಮೇಲೆ ಸೂರ್ಯ-ಚಂದ್ರರನ್ನು ಬಿಡಿಸುತ್ತಾರೆ. ನಂತರ ಧಾನ್ಯದ ರಾಶಿಯ ಮೇಲೆ ಗ್ವಾರಿ, ಮೊರ, ಬರಲು, ಕುಡಗೋಲು ಹೀಗೆ ಮುಂತಾದ ವಸ್ತುಗಳನ್ನಿಟ್ಟು ಪೂಜೆ ಮಾಡುತ್ತಾರೆ. ಪೂಜೆಗೆ ಬನ್ನಿಪತ್ರೆ, ತುಂಬೆಹೂ, ಮಾವಿನ ತೋರಣ, ಚೆಂಡು ಹೂ, ಅಣ್ಣಿಹೂ, ಜೋಳದಚೆಂಡು, ಬಾಳೆಎಲೆ ಹೀಗೆ ಮುಂತಾದ ಪೂಜಾ ಪರಿಕರಗಳನ್ನು ತಂದು ಕೃಷಿ ಉಪಕರಣಗಳನ್ನು ಒಂದೆಡೆ ಇಟ್ಟು ಪೂಜೆ ಮಾಡುತ್ತಾರೆ.

**"ರಾಸಿ ಗಾಳಿಯು ಬಿಸಿ ಸೂಸಿ ಹರಿಯಿತು ಕಣವು**
**ಕೂಸಕೋಳೂರ ಕಡೆಗಾಳಿ । ಬೀಸಿಂದು**
**ಮೀಸಲೀರಾಳಿ ಜಂಗಮಕೆ."**

ಎಂದು ಹಾಡು ಹೇಳುತ್ತಾ ತಾವು ಬೆಳೆದ ಬೆಳೆಯಲ್ಲಿ ಧಾನ್ಯವನ್ನು ದಾನ ಮಾಡುವ ವಿಷಯ ತಿಳಿಸುತ್ತದೆ.

ಈ ಪೂಜೆಗೆ ಮನೆಯ ಒಡೆಯನು ಊರಿನ ಜನರನ್ನೆಲ್ಲ ಕರೆದು ಬರುತ್ತಾನೆ. ಆಗ ಊರಿನ ಜನರು ಕಣದ ಹಬ್ಬಕ್ಕೆ ಬರುತ್ತಾರೆ. ಅಂದು ಜಾತ್ರೆಯೇ ಎಂಬಂತೆ ಜನ ಸೇರಿರುತ್ತಾರೆ. ನಂತರ ಸಾಲಾಗಿ ಜನರನ್ನು ಕೂಡಿಸಿ ಬಾಳೆ ಎಲೆಯಲ್ಲಿ ಊಟ ಬಡಿಸುತ್ತಾರೆ. ಈ ಊಟದಲ್ಲಿ 'ಕಿಚಡಿ' ಮುಖ್ಯ ಆಹಾರವಾಗಿರುತ್ತದೆ. ಅನ್ನ, ಸಾರು, ಕಾಳಿನಪಲ್ಯ, ಕೊಸಂಬರಿ ಇತ್ಯಾದಿ ಆಹಾರ ಪದಾರ್ಥಗಳು ಇರುತ್ತವೆ. ಮರುದಿನ ಕಾಳಿನ ರಾಶಿಯನ್ನು ತುಂಬಿ 'ಹಗೆ'ವಿಗೆ ಹಾಕುತ್ತಾರೆ. ಅದಕ್ಕು ಮುನ್ನ ತಾವು ಬೆಳೆದ ಬೆಳೆಯಲ್ಲಿ ತಮ್ಮ ಕೃಷಿಗೆ ಸಹಾಯಕರಾದಂತಹ ಬಡಿಗ, ಕಮ್ಮಾರ, ಚಮ್ಮಾರ, ಕ್ಷೌರಿಕರು, ಪೂಜಾರಿಗಳು, ಮನೆಯ ಅಯ್ಯನರು ಹೀಗೆ ಮುಂತಾದವರಿಗೆ ತಾವು ಬೆಳೆದ ಬೆಳೆಯನ್ನು, ಕಾಳುಗಳನ್ನು ಹಂಚುತ್ತಾರೆ. ನಂತರ ಉಳಿದಂತಹ ಕಾಳನ್ನು ವರ್ಷಪೂರ್ತಿ ಹಾಳಾಗದ ಹಾಗೆ ಇರುವಂತೆ ಬೇವಿನ ಸೊಪ್ಪು ಹಾಕಿ 'ಹಗೆ'ವಿನಲ್ಲಿ ಸಂಗ್ರಹಿಸಿ ಇಡುತ್ತಾರೆ.

ಹೀಗೆ ಜನಪದರು ತಮ್ಮ ಅನುಭವದಿಂದ ಬಂದ ಕೃಷಿ ಜ್ಞಾನವನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಆದರೆ ಇಂದಿನ ಆಧುನಿಕತೆಯ ತಂತ್ರಜ್ಞಾನದ ಭರಾಟೆಯಲ್ಲಿ ಸಿಕ್ಕಿಕೊಂಡು ನಮ್ಮ ಪೂರ್ವಜರು ಹಾಕಿ ಕೊಟ್ಟ ಹಳೆ ಕೃಷಿ ಆಚರಣೆಗಳು ನಶಿಸಿ ಹೋಗುತ್ತಿವೆ. ಕಾರಣ ಯಂತ್ರಗಳನ್ನು ಬಳಸಿ ಧಾನ್ಯವನ್ನು ಬಿತ್ತುವ ಮತ್ತು ಒಕ್ಕುವ ಕಾರ್ಯ ಯಂತ್ರಗಳಿಂದಲೇ ಆಗುತ್ತಿದೆ. ಇದರಿಂದ ಜನಪದರು ತಾವು ಕೆಲಸ ಮಾಡುವ ಸಂದರ್ಭದಲ್ಲಿ ಬೇಸರ ಕಳೆಯಲು ಹಾಡು, ಒಗಟು, ಸುಗ್ಗಿ ಹಾಡು ಹೇಳುತ್ತ ಕೆಲಸ ಮಾಡುವ ಪದ್ಧತಿ ನಶಿಸಿ ಹೋಗುತ್ತಿದೆ. ನಮ್ಮ ಪೂರ್ವಜರು ಆಚರಿಸುತ್ತಿದ್ದ ಆಚಾರ-ವಿಚಾರಗಳು, ಸಂಪ್ರದಾಯಗಳನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಬೇಕಿದೆ.

**ಮಾಹಿತಿದಾರರು:**

1. ಈರಯ್ಯ ಮಾ. ಹಿರೇಮಠ. (ಕೃಷಿಕರು). ಸಾ. ಕೊಲ್ಲಾಪುರ.
2. ಈರಪ್ಪ ನಾ. ಬ್ಯಾಡಗಿ. (ಕೃಷಿಕರು). ಸಾ. ಕೊಲ್ಲಾಪುರ.
3. ಚನಬಸಪ್ಪ ಮ. ಕರವಜ್ಜನವರ. (ಕೃಷಿಕರು). ಸಾ. ಬನ್ನಿಹಟ್ಟಿ.
4. ಶಿವಪ್ಪ ಮಾ. ಮಟ್ಟಿಮನಿ. (ಕೃಷಿಕರು). ಸಾ. ಮಾಸಣಗಿ.
5. ಯಲ್ಲಪ್ಪ ನಿ. ಗಡ್ಡದವರ. (ಕೃಷಿಕರು). ಸಾ. ಮಾಸಣಗಿ.
6. ಮಾದೇವಪ್ಪ ಮ. ಶಿಡೇನೂರ. (ಕೃಷಿಕರು). ಸಾ. ಕೊಲ್ಲಾಪುರ.

**ಪರಾಮರ್ಶನ ಗ್ರಂಥಗಳು:**


1. ತಾರಿಹಳ್ಳಿ ಹನುಮಂತಪ್ಪ. (2017). ಹೈದರಾಬಾದ್ ಕರ್ನಾಟಕದ ಕೃಷಿ ಆಚರಣೆಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
2. ಮಲ್ಲಿಕಾರ್ಜುನ ಹೊಸಪಾಳ್ಯ. (2008). ಕೃಷಿ ಆಚರಣೆ. ರಾಜಾ ಪ್ರಿಂಟರ್ಸ್. ಬೆಂಗಳೂರು.
3. ರಮೇಶ ಸ. ಚಿ. (2011). ಕೃಷಿ: ಪಾರಂಪರಿಕ ಜ್ಞಾನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
4. ರಮೇಶ ಸ. ಚಿ. (2010). ಕರ್ನಾಟಕದ ಕೃಷಿ ಆಚರಣೆಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
5. ಸೂರ್ಯನಾಥ ಯು ಕಾಮತ್. (1995). ಧಾರವಾಡ ಜಿಲ್ಲಾ ಗ್ಯಾಸೆಟಿಯರ. ಪರಿಶ್ರೀ ಪ್ರಿಂಟರ್ಸ್. ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.